# <u>ಕೂಸು ಕಂಡೆವಮ್ಮ ಅಮ್ಮ ನಿಮ್ಮ</u>

1. **Ref.:** Shri Purandara Dasara Sahitya Part – 4, Krishna Leele, edited by Shri Betageri Krishna Sharma and Shri Bengeri Huchhu Rayaru, page No. 26
2. **Note:** Singer has followed these lyrics.

ರಾಗ: ಪಂತುವರಾಳಿ          ತಾಳ: ಅಟ

ಕೂಸು ಕಂಡೆವಮ್ಮ, ಅಮ್ಮ, ನಿಮ್ಮ
ಕೂಸು ಕಂಡೆವಮ್ಮ     || ಪ ||

ಕಾಸಿಗೆ ವೀಸದ ಬಡ್ಡಿ ಗಳಿಸಿಕೊಂಡು
ಶೇಷಗಿರಿಯ ಮೇಲೆ ವಾಸವಾಗಿಪ್ಪನೆ     || 1 ||

ವಂಚಿಸಿ ಬಲೆಯೊಳ್ ಪ್ರಪಂಚವೆಲ್ಲ ಸೆಳೆದು
ಕಂಚಿ ಪಟ್ಟಣದಿ ಮಿಂಚಾಗಿಪ್ಪನೆ     || 2 ||

ಗುಡ್ಡ ಬೆರಳಲ್ಲೆತ್ತಿ ದೊಡ್ಡ ಗೋಗಳ ಕಾಯ್ದ
ಒಡ್ಡ ಜಗನ್ನಾಥ ಗಿಡ್ಡಾಗಿಪ್ಪನೆ     || 3 ||

ದುಡುಕು ಮಾಡಿ ಹಾಲು ಮಡಕೆಗಳನ್ನೊಡೆದು
ಹಡಗನೇರಿ ಬಂದು ಉಡುಪಿಯಲಿಪ್ಪನೆ     || 4 ||

ಮಂಗಳ ರೇಖೆ ಪದಂಗಳುಳ್ಳ ನಿಮ್ಮ
ರಂಗ ಪುರಂದರ ವಿಠಲ ಶ್ರೀ ಕೃಷ್ಣ     || 5 ||

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿ:**

ಗೋಪಿಯರು ಯಶೋದೆಯ ಬಳಿ ಬಂದು, ನಿನ್ನ ಕೂಸನ್ನು ನೋಡಿದೆವೆಂದು ಸಂಭ್ರಮದಿಂದ ಹೇಳುವುದು ಪಲ್ಲವಿಯಲ್ಲಿ ಮಾತ್ರವಿದೆ. ನುಡಿಗಳಲ್ಲೆಲ್ಲ ಬೇರೆ ಬೇರೆ ಕ್ಷೇತ್ರ ಸ್ಥಳ ದೇವತೆಗಳ ವರ್ಣನೆಯಿದೆ.

**ಶೇಷಗಿರಿ** = ತಿರುಪತಿ

**ವೀಸ** = ಚಿಕ್ಕ ನಾಣ್ಯ

**ದೊಡ್ಡಿ** = ತುರುಮಂದೆ

**Classification:** Keerthane
**Ankita:** purandara vittala
**Location:** NA
**Category:** Krishna Leele
**Sub-Category:** koosu, yashode, Tirupati, rokka, shesha, mosa, loka, kanchi, govu, Udupi, halu, mangala, ranga, Krishna,
**Pravachana:** NA
**Explanation:** NA